# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಜಂಟಿ ಆಯುಕ್ತರು (ಪೂರ್ವ)ರವರ ಕಛೇರಿ, ಕೇಂದ್ರ ಕಛೇರಿ, ಅನೆಕ್ಸ್-2, ಎನ್.ಆರ್. ವೃತ್ತ, ಬೆಂಗಳೂರು-02**

ಸಂಖ್ಯೆ: ಜಂಆ/ಪಿಆರ್/P-1844/2020-21 ದಿನಾಂಕ: 01.02.2021

## ಸಭಾ ಸೂಚನಾ ಪತ್ರ

**ವಿಷಯ:** ವಾರ್ಡ್ ಸಂಖ್ಯೆ-90 ರಲ್ಲಿನ ನಾಗರೀಕ ಸಮಸ್ಯೆಗಳ ಹಾಗೂ ಅಭಿವೃದ್ಧಿ ಕಾರ್ಯಗಳ ಕುರಿತು ಚರ್ಚಿಸುವ ಬಗ್ಗೆ.

********

**ಪಾಲಿಕೆಯ ವಾರ್ಡ್ ಸಂಖ್ಯೆ-90, ಹಲಸೂರು ವ್ಯಾಪ್ತಿಯಲ್ಲಿನ ನಾಗರೀಕ ಸಮಸ್ಯೆಗಳ ಹಾಗೂ ಅಭಿವೃದ್ಧಿ ಕಾರ್ಯಗಳ ಕುರಿತು ಚರ್ಚಿಸಲು** ಜಂಟಿ ಆಯುಕ್ತರು (ಪೂರ್ವ) ಹಾಗೂ ನೋಡಲ್ ಅಧಿಕಾರಿ, ವಾರ್ಡ್ ಸಂಖ್ಯೆ-90, ಹಲಸೂರುರವರ ಅಧ್ಯಕ್ಷತೆಯಲ್ಲಿ **ದಿನಾಂಕ: 04.02.2021 ರ ಗುರುವಾರದಂದು ಬೆಳಿಗ್ಗೆ 10.00 ಗಂಟೆಗೆ ಅಪಾರ್ಟ್‌ಮೆಂಟ್ ನಿವಾಸಿಗಳು, ಸಾರ್ವಜನಿಕರೊಂದಿಗೆ ಹಾಗೂ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಗಣೇಶ ದೇವಸ್ಥಾನದ ಹತ್ತಿರ(ಹಲಸೂರು ಕೆರೆ ಮುಂಭಾಗ), ಹಲಸೂರು, ಶಿವಾಜಿ ನಗರ ಉಪ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ** ಸಭೆಯನ್ನು ಆಯೋಜಿಸಲಾಗಿರುತ್ತದೆ. ಸದರಿ ಸಭೆಗೆ ವಾರ್ಡ್ ಸಂಖ್ಯೆ-90 ರ ವ್ಯಾಪ್ತಿಗೆ ಬರುವ ಈ ಕೆಳಕಂಡ ಅಧಿಕಾರಿಗಳು/ಕಮಿಟಿ ಸದಸ್ಯರು/ಸಾರ್ವಜನಿಕರು ಸಂಬಂಧಿಸಿದ ಸೂಕ್ತ ದಾಖಲೆಗಳೊಂದಿಗೆ ಹಾಜರಾಗಲು ಸೂಚಿಸಿದೆ.

**(ಸೂಚನೆ: ಸಭೆಗೆ ಗೈರು ಹಾಜರಾಗುವ ಅಧಿಕಾರಿಗಳ ವಿರುದ್ಧ ಸೂಕ್ತ ಶಿಸ್ತು ಕ್ರಮ ಜರುಗಿಸಲಾಗುವುದು).**

**ಜಂಟಿ ಆಯುಕ್ತರು & ನೋಡಲ್ ಅಧಿಕಾರಿ**
**ವಾರ್ಡ್ ಸಂಖ್ಯೆ-90, ಹಲಸೂರು**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ರವರಿಗೆ,**

1. ಮುಖ್ಯ ಅಭಿಯಂತರರು, ಪೂರ್ವ, ಪೂರ್ವವಲಯ
2. ಮುಖ್ಯ ಅಭಿಯಂತರರು, ಕೆರೆಗಳು, ಪೂರ್ವವಲಯ
3. ಅಧೀಕ್ಷಕ ಅಭಿಯಂತರರು, ಪೂರ್ವವಲಯ
4. ಮುಖ್ಯ ಆರೋಗ್ಯಾಧಿಕಾರಿಗಳು, ಶಿವಾಜಿನಗರ ವಿಭಾಗ
5. ಆಡಳಿತ/ಅಧಿಕಾರಿ ವರ್ಗ, ಬಿ.ಎಂ.ಆರ್.ಸಿ.ಎಲ್
6. ಕಾರ್ಯಪಾಲಕ ಅಭಿಯಂತರರು, ಶಿವಾಜಿನಗರ ವಿಭಾಗ
7. ಕಂದಾಯ ಅಧಿಕಾರಿ (ಶಿವಾಜಿನಗರ)
8. ಅರಣ್ಯ ಅಧಿಕಾರಿ (ಪೂರ್ವ ವಲಯ)
9. ತೋಟಗಾರಿಕೆ ಅಧೀಕ್ಷಕರು (ಪೂರ್ವ)
10. ಆರೋಗ್ಯ ವೈದ್ಯಾಧಿಕಾರಿ (ಪೂರ್ವ)
11. ಉಪ ನಿರ್ದೇಶಕರು (ಪಶುಪಾಲನೆ)
12. ಸಹಾಯಕ ಕಂದಾಯ ಅಧಿಕಾರಿ (ಕಲ್ಯಾಣ-ಪೂರ್ವ)

(ಪು.ತಿ.ನೋ)

13. ಆರಕ್ಷಕ ನಿರೀಕ್ಷಕರು (ಹಲಸೂರು-ಸಂಚಾರಿ) ವಿಭಾಗ
14. ಆರಕ್ಷಕ ನಿರೀಕ್ಷಕರು (ಹಲಸೂರು-ಕಾನೂನು ಮತ್ತು ಸುವ್ಯವಸ್ಥೆ) ವಿಭಾಗ
15. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯೂಎಸ್ಎಸ್‌ಬಿ).
16. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ
17. ಸಹಾಯಕ ಕಾರ್ಯಪಾಲಕ ಅಭಿಯಂತರರು, ಅರಣ್ಯ ಇಲಾಖೆ, ಹಲಸೂರು ವಿಭಾಗ
18. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಂದಾಯ ಇಲಾಖೆ, ಹಲಸೂರು ವಿಭಾಗ
19. ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಮಳೆ ನೀರಿನ ಚರಂಡಿ)
20. ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ವಿದ್ಯುತ್-ಪೂರ್ವ)
21. ವಾರ್ಡ್ ಮಾರ್ಷಲ್ & ಸೂಪರ್‌ವೈಸರ್
22. ಸಹಾಯಕ ಕಾರ್ಯಪಾಲಕ ಅಭಿಯಂತರರು, ಫತ್ಯಾನಿ
23. ಸಹಾಯಕ ಕಾರ್ಯಪಾಲಕ ಅಭಿಯಂತರರು, ಇಂಜಿನಿಯರ್ ವಿಭಾಗ, ಶಿವಾಜಿನಗರ ವಿಭಾಗ
24. ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ-೯೦
25. ಕಿರಿಯ ಆರೋಗ್ಯ ಪರಿವೀಕ್ಷಕರು, ಫತ್ಯಾನಿ, ವಾರ್ಡ್ ಸಂಖ್ಯೆ-೯೦
26. ಗುತ್ತಿಗೆದಾರರು, ಫತ್ಯಾನಿ ವಿಭಾಗ
27. ರೆಸಿಡೆನ್ಸ್ ವೆಲ್ಫೇರ್ ಅಸೋಸಿಯೇಷನ್, ಹಲಸೂರು
28. ಪ್ರಧಾನ ಗ್ಯಾಂಗ್ ಮೆನ್
29. ಲಿಂಕ್ ವರ್ಕರ್ಸ್
30. ಸಂಬಂಧಪಟ್ಟ ಎಲ್ಲಾ ಇಲಾಖಾ ಅಧಿಕಾರಿ/ನೌಕರರುಗಳ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

**ಪ್ರತಿಯನ್ನು:**

1. ಮಾನ್ಯ ಶಾಸಕರು, ಶಿವಾಜಿನಗರ ವಿಧಾನ ಸಭಾ ಕ್ಷೇತ್ರರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಮಾನ್ಯ ವಿಶೇಷ ಆಯುಕ್ತರು (ಫತ್ಯಾನಿ & ಆಡಳಿತ) ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಉಪ ಆಯುಕ್ತರು (ಆಡಳಿತ) ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
6. ಜಂಟಿ ಆಯುಕ್ತರು, ಪೂರ್ವ ವಲಯರವರಿಗೆ ಮಾಹಿತಿಗಾಗಿ ಕಳುಹಿಸಿದೆ.
7. ಸಂಬಂಧಪಟ್ಟವರಿಗೆ/ಕಛೇರಿ ಪ್ರತಿ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ: 04.02.2021 ಗುರುವಾರದಂದು ಜಂಟಿ ಆಯುಕ್ತರು (ಫ.ತ್ಯಾ.ನಿ) ಮತ್ತು ನೋಡಲ್ ಅಧಿಕಾರಿ, ವಾರ್ಡ್ ಸಂಖ್ಯೆ-90, ಹಲಸೂರು ರವರ ಅಧ್ಯಕ್ಷತೆಯಲ್ಲಿ ಪಾಲಿಕೆಯ ವಾರ್ಡ್ ಸಂಖ್ಯೆ-90, ಹಲಸೂರು ವ್ಯಾಪ್ತಿಯಲ್ಲಿನ ನಾಗರೀಕ ಸಮಸ್ಯೆಗಳ ಹಾಗೂ ಅಭಿವೃದ್ಧಿ ಕಾರ್ಯಗಳ ಕುರಿತು ಚರ್ಚಿಸುವ ಸಲುವಾಗಿ ಸಭೆಯನ್ನು ನಡೆಸಲಾಗಿದ್ದು, ಸದರಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಿದ ನಡವಳಿಗಳು.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:-

- ಜಂಟಿ ಆಯುಕ್ತರು (ಫತ್ಯಾನಿ) ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್ ಸಂಖ್ಯೆ-90, ಹಲಸೂರು, ಶಿವಾಜಿನಗರ ಉಪವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
- ಶ್ರೀಮತಿ. ಮಂಜುಳ, ತೋಟಗಾರಿಕೆ ಇಲಾಖೆ
- ಶ್ರೀ. ಜಿ.ಎಂ. ಪ್ರಕಾಶ್, ಅಸೆಸರ್
- ಶ್ರೀ. ರವಿಕುಮಾರ್, ಪೋಲೀಸ್ ಕಾನ್ಸ್‌ಟೇಬಲ್.
- ಶ್ರೀ. ಪುಂಡಾಲಿಕ್, ಪೋಲೀಸ್ ಕಾನ್ಸ್‌ಟೇಬಲ್.
- ಶ್ರೀ. ಆಕಾಶ್ ದೀಪ್ ಪಿ, ಕಿರಿಯ ಆರೋಗ್ಯ ಪರಿವೀಕ್ಷಕರು, ಫತ್ಯಾನಿ, ವಾರ್ಡ್ ಸಂಖ್ಯೆ-90
- ವಾರ್ಡ್ ಮಾರ್ಷಲ್
- ಪೌರಕಾರ್ಮಿಕರ ಸೂಪರ್ ವೈಸರ್ಸ್
- ವಾರ್ಡ್ ಕಮಿಟಿ ಸದಸ್ಯರು/ಸ್ಥಳೀಯ ನಿವಾಸಿಗಳು.

ಮೊದಲಿಗೆ ಜಂಟಿ ಆಯುಕ್ತರು (ಫ.ತ್ಯಾ.ನಿ) ಹಾಗೂ ನೋಡಲ್ ಅಧಿಕಾರಿ, ವಾರ್ಡ್ ಸಂಖ್ಯೆ-90, ಹಲಸೂರುರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳಿಗೆ ಮತ್ತು ವಾರ್ಡ್ ಕಮಿಟಿ ಸದಸ್ಯರಿಗೆ ಹಾಗೂ ಸ್ಥಳೀಯ ನಿವಾಸಿಗಳಿಗೆ ಸ್ವಾಗತವನ್ನು ಬಯಸಿದರು ಹಾಗೂ ಸಭೆಯಲ್ಲಿ ಪಾಲಿಕೆಯ ವಾರ್ಡ್ ಸಂಖ್ಯೆ-90, ಹಲಸೂರು ವ್ಯಾಪ್ತಿಯಲ್ಲಿನ ನಾಗರೀಕ ಸಮಸ್ಯೆಗಳ ಹಾಗೂ ಅಭಿವೃದ್ಧಿ ಕಾರ್ಯಗಳ ಕುರಿತು ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನಿಸಲಾಯಿತು.

ನೋಡಲ್ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳೊಂದಿಗೆ ಹಾಗೂ ಸದಸ್ಯರೊಂದಿಗೆ ವಾರ್ಡ್ ಸಮಸ್ಯೆಗಳ ಬಗ್ಗೆ ಹಾಗೂ ವಾರ್ಡಿನಲ್ಲಿ ಅಭಿವೃದ್ಧಿಯಾಗಬೇಕಾಗಿರುವ ವಿಷಯಗಳ ಕುರಿತು ಈ ಹಿಂದೆ ದಿನಾಂಕ: 16.01.2021 ರಂದು ನಡೆದ **Zoom Meeting** ಸಭೆಯಲ್ಲಿ ನಿರ್ಣಯಿಸಿದ ಅಂಶಗಳನ್ನು ಪ್ರಸ್ತಾಪಿಸಿ, ಈ ಕೆಳಕಂಡಂತೆ ತೀರ್ಮಾನಿಸಲಾಯಿತು.

- ರಾಜಕಾಲುವೆಗಳಲ್ಲಿ ಪ್ರಾಣಿ ತ್ಯಾಜ್ಯ ಎಸೆಯುತ್ತಿರುವುದನ್ನು ತಡೆಗಟ್ಟಲು ಕೋರಲಾಯಿತು.
  **ಕ್ರಮ: ಸ್ಟಾರ್ಮ್ ವಾಟರ್ ಡ್ರೈನ್‌ರವರಿಗೆ ಪತ್ರ ಮುಖೇನ ದೂರು ನೀಡಲು ಸೂಚಿಸಲಾಯಿತು. ಅದರಂತೆ ಮುಂದಿನ ಅಗತ್ಯ ಕ್ರಮಕ್ಕಾಗಿ ಪತ್ರವನ್ನು (ಸಂಖ್ಯೆ:ಜಂಆ/ಫತ್ಯಾನಿ/ಪಿಆರ್/1631/20-21) ಸಿದ್ಧಪಡಿಸಿ ಕಾರ್ಯಪಾಲಕ ಅಭಿಯಂತರರು, ಸ್ಟಾರ್ಮ್ ವಾಟರ್ ಡ್ರೈನ್‌ರವರಿಗೆ ರವಾನಿಸಲಾಗಿದ್ದು, ಸದರಿ ಸಭೆಗೆ ಗೈರು ಹಾಜರಾಗಿರುತ್ತಾರೆ.
  ದೂರವಾಣಿ ಮುಖಾಂತರ ಮುಂದಿನ ಸಭೆಗೆ ಹಾಜರಾಗಲು ಸೂಚಿಸಲಾಗಿರುತ್ತದೆ.**

(ಪು.ತಿ.ನೋ)

- ಗಂಗಾಧರ್ ಚೆಟ್ಟಿ ರಸ್ತೆ, ಗುರುದ್ವಾರ ಹಾಗೂ ಯಲ್ಲಮ್ಮ ದೇವಸ್ಥಾನ ಇನ್ನೂ ಮುಂತಾದ ರಸ್ತೆಗಳಲ್ಲಿ ಬೀದಿ ದೀಪಗಳನ್ನು ಅಳವಡಿಸಲು ಕೋರಲಾಯಿತು.
  **ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಲೆಕ್ಟ್ರಿಕಲ್ ವಿಭಾಗರವರಿಗೆ ಸೂಕ್ತ ಕ್ರಮ ವಹಿಸಲು ಹಾಗೂ ವರದಿ ಸಲ್ಲಿಸಲು ಸೂಚಿಸಲಾಗಿದ್ದು, ಸದರಿ ಸಭೆಗೆ ಗೈರು ಹಾಜರಾಗಿರುತ್ತಾರೆ. ದೂರವಾಣಿ ಮುಖಾಂತರ ಮುಂದಿನ ಸಭೆಗೆ ಹಾಜರಾಗಲು ಸೂಚಿಸಲಾಗಿರುತ್ತದೆ.**

- ವಾರ್ಡ್‌ನ ಕೆಲವು ರಸ್ತೆಗಳಲ್ಲಿ ಖಾಸಗಿ ಸಂಸ್ಥೆಯವರು ಕೇಬಲ್ ತಂತಿಗಳನ್ನು ಎಲ್ಲೆಂದರಲ್ಲಿ ಹಾಕಿರುವುದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿರುವುದಾಗಿ ಹಾಗೂ ಈ ಕೇಬಲ್ಸ್‌ಗಳನ್ನು ವ್ಯವಸ್ಥಿತವಾಗಿ ಅಳವಡಿಸಲು ಕೋರಲಾಯಿತು.
  **ಕ್ರಮ: ಓಎಫ್‌ಸಿ ಕೇಬಲ್‌ರವರೊಂದಿಗೆ ಹಾಗೂ ಸಂಬಂಧಪಟ್ಟ ಏಜೆನ್ಸಿರವರೊಂದಿಗೆ ಚರ್ಚಿಸಲಾಗಿದ್ದು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಹಾಗೂ ಸ್ಮಾರ್ಟ್ ಸಿಟಿ ಇಲಾಖೆಯ ಅಧಿಕಾರಿಗಳ ಸಹಯೋಗದೊಂದಿಗೆ ಕೇಬಲ್ಸ್‌ಗಳನ್ನು ವ್ಯವಸ್ಥಿತವಾಗಿ ಅಳವಡಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಯಿತು.**

- ಅವಿಷ್ಕಾ ಅಕಾಡೆಮಿ ಶಾಲೆಯ ಬಳಿ ಧೂಮಪಾನ ಮಾಡುವುದನ್ನು ನಿಷೇಧಿಸಲು ಕೋರಲಾಯಿತು.
  **ಕ್ರಮ: ಹಿರಿಯ ಆರೋಗ್ಯ ಪರಿವೀಕ್ಷಕರು ಈ ಕುರಿತಂತೆ ಪರಿಶೀಲಿಸಿ ಮಾರಾಟದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಹಾಗೂ "ಧೂಮಪಾನ ನಿಷೇಧಿಸಿದೆ" ಎಂಬ ಸೂಚನಾ ಪತ್ರವನ್ನು ಅಂಟಿಸಲು ಹಿಂದಿನ ಸಭೆಯಲ್ಲಿ ಸೂಚಿಸಲಾಗಿತ್ತು. ಆದರೆ ಸದರಿಯವರು ಸಭೆಗೆ ಗೈರು ಹಾಜರಾಗಿರುತ್ತಾರೆ. ದೂರವಾಣಿ ಮುಖಾಂತರ ಮುಂದಿನ ಸಭೆಗೆ ಹಾಜರಾಗಲು ಹಾಗೂ ವರದಿ ಸಲ್ಲಿಸಲು ಸೂಚಿಸಲಾಗಿರುತ್ತದೆ.**

- **ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲು ಸಾರ್ವಜನಿಕರು ಕೋರಿರುವಂತೆ, ಈಗಾಗಲೇ ಕಡತವನ್ನು (ಸಂಖ್ಯೆ:ಜಂಆ/ಫತ್ಯಾನಿ/ಪಿಆರ್/1844/20-21) ಮಂಡಿಸಲಾಗಿದ್ದು, ಪ್ರಸ್ತುತ ಮಾನ್ಯ ವಿಶೇಷ ಆಯುಕ್ತರು (ಫತ್ಯಾನಿ)ರವರ ಅನುಮೋದನೆಗಾಗಿ ಕಡತ ವಿಲೇವಾರಿಯಾಗಿರುತ್ತದೆ.**

- ಪಾಲಿಕೆಯಿಂದ ವಾರ್ಡ್‌ನಲ್ಲಿ ಪ್ರತಿ ಶನಿವಾರದಂದು ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದು, ಆಳವಾದ ಸ್ವಚ್ಛತೆಯನ್ನು ಮಾಡುತ್ತಾ ಬರುತ್ತಿರುವುದರ ಬಗ್ಗೆ ಸ್ಥಳೀಯರು ಪ್ರಶಂಸೆ ವ್ಯಕ್ತಪಡಿಸಿ, ಡೆಬ್ರಿಸ್‌ಗಳನ್ನು ಸಂಪೂರ್ಣವಾಗಿ ತೆರವುಗೊಳಿಸಲು ಕೋರಿದರು.
  **ಕ್ರಮ: ಡೆಬ್ರಿಸ್‌ಗಳನ್ನು ಸಂಪೂರ್ಣವಾಗಿ ತೆರವುಗೊಳಿಸಲು ಸಿಲ್ಟ್ & ಟ್ರಾಕ್ಟರ್‌ಗಳನ್ನು ಪಡೆಯಲು ಇಂಜಿನಿಯರಿಂಗ್ ವಿಭಾಗದಿಂದ ವಿಳಂಬವಾಗುತ್ತಿರುವ ಹಿನ್ನೆಲೆಯಲ್ಲಿ ಮಾನ್ಯ ಆಡಳಿತಾಧಿಕಾರಿಗಳ ಹಾಗೂ ಮಾನ್ಯ ಆಯುಕ್ತರ ಒಪ್ಪಿಗೆ ಪಡೆದು ಜೆ.ಸಿ.ಬಿ ಹಾಗೂ ಸಿಲ್ಟ್ & ಟ್ರಾಕ್ಟರ್‌ಗಳನ್ನು ಪಡೆಯಲು ಕ್ರಮವಹಿಸುವುದಾಗಿ ಸಭೆಗೆ ತಿಳಿಸಲಾಯಿತು. ಅದರಂತೆ ಪತ್ರ ಸಿದ್ಧಪಡಿಸಿ (ಸಂಖ್ಯೆ:ಜಂಆ/ಫತ್ಯಾನಿ/ಪಿಆರ್/1738/20-21) ಮಾನ್ಯ ಆಯುಕ್ತರ ಆಪ್ತ ಕಛೇರಿಗೆ ರವಾನಿಸಲಾಗಿತ್ತು.**
  **ಮುಂದುವರೆದು, ಈ ಕುರಿತಾಗಿ ಮಾನ್ಯ ಆಯುಕ್ತರು ರವರೊಂದಿಗೆ ಚರ್ಚಿಸಿದ್ದು, ಪ್ರಧಾನ ಮಾರ್ಷಲ್‌ರವರಿಗೆ ಜೆ.ಸಿ.ಬಿ ಹಾಗೂ ಸಿಲ್ಟ್ & ಟ್ರಾಕ್ಟರ್‌ಗಳನ್ನು ಪಡೆಯುವ ಜವಾಬ್ದಾರಿ ವಹಿಸಿದ್ದು, ಸದರಿಯವರಿಂದ ಜೆ.ಸಿ.ಬಿ ಹಾಗೂ ಸಿಲ್ಟ್ & ಟ್ರಾಕ್ಟರ್‌ಗಳನ್ನು ಪಡೆದು ಡೆಬ್ರಿಸ್‌ಗಳನ್ನು ಸಂಪೂರ್ಣವಾಗಿ ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಯಿತು.**

(ಮು.ತಿ.ನೋ)

- ಅನಗತ್ಯವಾಗಿ ಅಂಟಿಸಿರುವ ಪೋಸ್ಟರ್‌ಗಳನ್ನು ತೆರವುಗೊಳಿಸಲು ಜಂಟಿ ಆಯುಕ್ತರು, ರೆವಿನ್ಯೂ, ಪೂರ್ವ ವಲಯರವರಿಗೆ ಪತ್ರ ಬರೆಯಲು ಹಾಗೂ ಪೋಸ್ಟರ್‌ನಲ್ಲಿರುವ ವ್ಯಕ್ತಿ/ಸಂಸ್ಥೆಗಳಿಗೆ ಮಾನ್ಯ ಉಚ್ಚ ನ್ಯಾಯಲಯದ ಆದೇಶದಂತೆ FIR ದಾಖಲು ಮಾಡಲು ಕ್ರಮವಹಿಸುವಂತೆ ಸೂಚಿಸಲಾಯಿತು.
  **ಕ್ರಮ: ಜಂಟಿ ಆಯುಕ್ತರು, ರೆವಿನ್ಯೂ, ಪೂರ್ವ ವಲಯರವರಿಗೆ ಹಾಗೂ ವೃತ್ತ ನಿರೀಕ್ಷಕರು, ಹಲಸೂರು ಹಾಗೂ ಭಾರತಿನಗರ ಠಾಣೆ ರವರಿಗೆ ಪತ್ರ (ಪತ್ರ ಸಂಖ್ಯೆ:ಜಂಆ/ಛತ್ಯಾನಿ/ಪಿಆರ್/1632/20-21) ಸಿದ್ಧಪಡಿಸಿ ರವಾನಿಸಲಾಗಿದೆ. ಈ ಕುರಿತಂತೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ಹಾಜರಿದ್ದ ಶ್ರೀ. ರವಿಕುಮಾರ್, ಪೋಲೀಸ್ ಇಲಾಖೆರವರು ತಿಳಿಸಿದರು.**

- ವಾರ್ಡ್ ವ್ಯಾಪ್ತಿಯಲ್ಲಿನ ಎಲ್ಲಾ 14 ಬ್ಲಾಕ್‌ಗಳಿಗೆ ಆಸಕ್ತ ನಾಗರೀಕರಿಂದ ಸ್ವ ಇಚ್ಛೆಯಿಂದ ಸ್ವಚ್ಛತೆಗಾಗಿ ಗಮನಹರಿಸಲು ಜವಾಬ್ದಾರಿ ವಹಿಸುವಂತೆ ಸೂಚಿಸಲಾಯಿತು. ವಾರ್ಡ್ ಈ ಕುರಿತಂತೆ ಬೊಮ್ಮನಹಳ್ಳಿ ವಲಯ ವ್ಯಾಪ್ತಿಯ ಹೆಚ್.ಎಸ್.ಆರ್ ಲೇ ಔಟ್‌ನಲ್ಲಿರುವ ಕಲಿಕಾ ಕೇಂದ್ರಕ್ಕೆ ಭೇಟಿ ನೀಡಲು ಈ ಹಿಂದಿನ ಸಭೆಯಲ್ಲಿ ನಿರ್ಧರಿಸಲಾಗಿದ್ದು, **ದಿನಾಂಕ: 20.01.2021 ರ ಬುಧವಾರದಂದು ಬೆಳಗ್ಗೆ 8.00 ಗಂಟೆಗೆ ಸುಮಾರು 15 ಜನ ಸ್ಥಳೀಯ ನಿವಾಸಿ/ಸಮಿತಿ ಸದಸ್ಯರನ್ನು ಹೆಚ್.ಎಸ್.ಆರ್ ಲೇ ಔಟ್‌ನಲ್ಲಿರುವ ಕಲಿಕಾ ಕೇಂದ್ರಕ್ಕೆ ಭೇಟಿ ನೀಡಲು ವಾಹನ ವ್ಯವಸ್ಥೆ ಒದಗಿಸಲಾಗಿತ್ತು. ಈ ಕುರಿತಾಗಿ ಸಾರ್ವಜನಿಕರಿಂದ ಪ್ರಶಂಸೆ ವ್ಯಕ್ತಪಡಿಸಲಾಯಿತು.**

- ತೋಟಗಾರಿಕೆ ಇಲಾಖೆ ವ್ಯಾಪ್ತಿಗೆ ಒಳಪಡುವ ಅಂಗಡಿಗಳನ್ನು ಮುಚ್ಚುವಂತೆ ಕೋರಲಾಯಿತು.
  **ಕ್ರಮ: ಸಭೆಗೆ ಹಾಜರಾಗಿದ್ದ ಶ್ರೀ. ಜಿ.ಎಂ. ಪ್ರಕಾಶ್, ಕಂದಾಯ ವಿಭಾಗ ರವರಿಗೆ ಮಾಹಿತಿ ನೀಡಲು ಸೂಚಿಸಲಾಯಿತು.**

- ಅನಧಿಕೃತವಾಗಿ ಹಾಗೂ ಖಾಲಿ ಇರುವ ಬಿಬಿಎಂಪಿ ಜಾಗಗಳನ್ನು ಗುರುತಿಸಿ ಗ್ರಂಥಾಲಯ, ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸಲು ತೀರ್ಮಾನಿಸಲಾಯಿತು.
  **ಕ್ರಮ: ಸಹಾಯಕ ಕಂದಾಯ ಅಧಿಕಾರಿ, ಶಿವಾಜಿನಗರ ಉಪವಿಭಾಗರವರಿಗೆ ಪೂರ್ಣ ಮಾಹಿತಿ ನೀಡಲು ಸೂಚಿಸಲಾಗಿದೆ.**

- ಸಾರ್ವಜನಿಕ ಶೌಚಾಲಯ/ಇ ಟಾಯ್ಲೆಟ್ಸ್/ಓಡಿಎಫ್ ++ ಟಾಯ್ಲೆಟ್ಸ್‌ಗಳನ್ನು ನಿರ್ಮಿಸಲು ಟೆಂಡರ್ ಕರೆಯಲು ಸಹಾಯಕ ಕಾರ್ಯಪಾಲಕ ಅಭಿಯಂತರರು (ಛತ್ಯಾನಿ) ರವರಿಗೆ ಸೂಚಿಸಲಾಯಿತು.
  **ಕ್ರಮ: ಹಲಸೂರು ರಸ್ತೆ ವೃತ್ತ, ಫಿಲಿಫ್ಸ್, ಎಂ.ವಿ. ಗಾರ್ಡನ್, ಬಜಾರ್ ಸ್ಟ್ರೀಟ್, ಸ್ವಾಮಿ ವಿವೇಕಾನಂದ ರಸ್ತೆಗಳನ್ನೊಳಗೊಂಡಂತೆ 5 ಜಾಗಗಳಲ್ಲಿ ಇ-ಟಾಯ್ಲೆಟ್ ನಿರ್ಮಿಸಲು ಜಾಗಗಳನ್ನು ಗುರುತಿಸಲಾಗಿದ್ದು, ಸಹಾಯಕ ಕಾರ್ಯಪಾಲಕ ಅಭಿಯಂತರರು (ಛತ್ಯಾನಿ)ರವರಿಗೆ ಅಗತ್ಯ ಕ್ರಮ ವಹಿಸಿ ವರದಿ ನೀಡಲು ಸೂಚಿಸಲಾಗಿದೆ.**

- ವಾರ್ಡ್ ವ್ಯಾಪ್ತಿಯಲ್ಲಿನ ಕೆಲವು ಭಾಗಗಳಲ್ಲಿ ಕಳ್ಳತನದ ಹಾಗೂ ಮಕ್ಕಳ ಅಪಹರಣ ಪ್ರಸಂಗಗಳು ಬಗ್ಗೆ ಸಭೆಯ ಗಮನಕ್ಕೆ ತರಲಾಯಿತು.
  **ಕ್ರಮ: ಈ ಕುರಿತು ವಾರ್ಡ್ ವ್ಯಾಪ್ತಿಯಲ್ಲಿ ಪೋಲೀಸ್ ಸಿಬ್ಬಂದಿಗಳು ಪೆಟ್ರೋಲಿಂಗ್ ಮಾಡಲು ವೃತ್ತ ನಿರೀಕ್ಷಕರು, ಕಾನೂನು ಮತ್ತು ಸುವ್ಯವಸ್ಥೆ, ಹಲಸೂರು ಮತ್ತು ಭಾರತಿನಗರ ಪೋಲೀಸ್ ವಿಭಾಗರವರಿಗೆ ಪತ್ರ ಸಿದ್ಧಪಡಿಸಿ (ಸಂಖ್ಯೆ:ಜಂಆ/ಛತ್ಯಾನಿ/ಪಿಆರ್/1739/20-21) ರವಾನಿಸಲಾಗಿದೆ. ಈ ಕುರಿತಂತೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ಹಾಜರಿದ್ದ ಶ್ರೀ. ರವಿಕುಮಾರ್, ಪೋಲೀಸ್ ಇಲಾಖೆರವರು ತಿಳಿಸಿದರು.**

(ಮು.ತಿ.ನೋ)

- ಓಸ್ಬಾರ್ನ್ ರಸ್ತೆಯಲ್ಲಿನ ಚಿಕ್ಕಣ್ಣ ಟಿಫಿನ್ ರೂಮ್ ಹೋಟೆಲ್ ನ್ನು ಮುಚ್ಚಲು ಸಭೆಗೆ ಕೋರಲಾಯಿತು.
  **ಕ್ರಮ: ಈ ಕುರಿತು ಹೋಟೆಲ್ ನ್ನು ಮುಚ್ಚಲು ಹಾಗೂ ಕೈಗೊಂಡ ಕ್ರಮದ ಬಗ್ಗೆ ವರದಿ ಸಲ್ಲಿಸಲು ಸಭೆಗೆ ಅನಾರೋಗ್ಯ ನಿಮಿತ್ತ ಗೈರುಹಾಜರಾಗಿದ್ದ ಹಿರಿಯ ಆರೋಗ್ಯ ಪರಿವೀಕ್ಷರಿಗೆ ದೂರವಾಣಿ ಮೂಲಕ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.**

**ಮುಂದುವರೆದು, ಸಾರ್ವಜನಿಕರಿಂದ ಈ ಕೆಳಕಂಡಂತೆ ಅಹವಾಲುಗಳನ್ನು ಸಲ್ಲಿಸಲಾಯಿತು.**

1. 1 ನೇ ರಸ್ತೆ, ಓಸ್ಬಾರ್ನ್ ರಸ್ತೆ, ಜೈನ್ ದೇವಸ್ಥಾನದ ಮುಂಭಾಗದಲ್ಲಿ ಕಾಂಕ್ರೀಟ್ ವಿದ್ಯುತ್ ಕಂಬ ಮುರಿದು ಬೀಳುವ ಹಂತದಲ್ಲಿದ್ದು, ಗಂಭೀರ ಅಪಾಯ ಸಂಭವಿಸುವ ಮುನ್ನ ಬದಲಾಯಿಸಲು ಕೋರಲಾಯಿತು.
   **ಕ್ರಮ: ಈ ಕುರಿತಂತೆ ಶ್ರೀ. ಲಕ್ಷ್ಮಣ್, 9449874903 & 9449874202 ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ವಿಭಾಗ ರವರಿಗೆ ಪತ್ರ ಬರೆದು ಶಿಥಿಲಾವಸ್ಥೆಯಲ್ಲಿರುವ ವಿದ್ಯುತ್ ಕಂಬವನ್ನು ಬದಲಾಯಿಸಲು ಹಾಗೂ ಅದರ ವರದಿಯನ್ನು ಮುಂದಿನ ಸಭೆಯಲ್ಲಿ ಸಲ್ಲಿಸಲು ಸೂಚಿಸಲಾಯಿತು. ಪೂರ್ಣ ಚಂದ್ರ ತೇಜಸ್ವಿ, 9449844672 ಸಹಾಯಕ ಕಾರ್ಯಪಾಲಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರು ವರದಿ ಸಲ್ಲಿಸುವುದಾಗಿ ಸೂಚಿಸಿರುತ್ತಾರೆ.**

2. ಆನೆ ಪಾರ್ಕ್ ಬಳಿ ರಸ್ತೆ ಕಾಮಗಾರಿ ನಡೆದಿದ್ದು, ತೀರಾ ಕಳಪೆ ಮಟ್ಟದಲ್ಲಿರುತ್ತದೆಂದು ಸಾರ್ವಜನಿಕರು ಸಭೆಗೆ ದೂರಿದರು.
   **ಕ್ರಮ: ಶ್ರೀ. ಸೈಫುದ್ದೀನ್, ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ ಹಾಗೂ ಶ್ರೀ. ಓಂ ಪ್ರಕಾಶ್ 9538101001 ರವರಿಗೆ ದೂರವಾಣಿ ಮುಖೇನ ತಿಳಿಸಲಾಗಿದ್ದು, ವರದಿ ಸಲ್ಲಿಸುವುದಾಗಿ ಸೂಚಿಸಿರುತ್ತಾರೆ.**

3. ವಾರ್ಡ್ ವ್ಯಾಪ್ತಿಯಲ್ಲಿ ಎಲ್.ಇ.ಡಿ ಬಲ್ಬ್‌ಗಳನ್ನು ಅಳವಡಿಸಲು ಕೋರಲಾಯಿತು.
   **ಕ್ರಮ: 9743301942 ಸಂದೀಪ್, ಎಲೆಕ್ಟ್ರಿಕಲ್ ವಿಭಾಗರವರೊಂದಿಗೆ ದೂರವಾಣಿ ಮುಖಾಂತರ ತಿಳಿಸಲಾಗಿದ್ದು, ಪೈಲಟ್ ಯೋಜನೆಯಡಿ ವಸಂತನಗರ ವ್ಯಾಪ್ತಿಯಲ್ಲಿ ಪ್ರಥಮ ಹಂತವಾಗಿ ಎಲ್.ಇ.ಡಿ ಬಲ್ಬ್‌ಗಳನ್ನು ಅಳವಡಿಸಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಹಲಸೂರು ವ್ಯಾಪ್ತಿಯಲ್ಲಿಯೂ ಅಳವಡಿಸಲಾಗುವುದೆಂದು ದೂರವಾಣಿ ಮೂಲಕ ತಿಳಿಸಿರುತ್ತಾರೆ.**

4. ಬಿ.ಪಿ.ಎಲ್ ಕಾರ್ಡ್ ನೀಡಲು ಕೋರಲಾಯಿತು.
   **ಕ್ರಮ: ಮುಂದಿನ ಬಾರಿ ನಡೆಸಲಾಗುವ ಸಮಿತಿ ಸಭೆಗೆ ಮಾನ್ಯ ಶಾಸಕರನ್ನು ಆಹ್ವಾನಿಸಿ, ಅವರ ಅವಗಾಹನೆಗೆ ತರಲು ತೀರ್ಮಾನಿಸಲಾಯಿತು.**

5. ವಾರ್ಡ್‌ನಲ್ಲಿ ಇಂದಿರಾ ಕ್ಯಾಂಟಿನ್ ನ್ನು ಆರಂಭಿಸಲು ಕೋರಲಾಯಿತು.
   **ಕ್ರಮ: ಮುಂದಿನ ಬಾರಿ ನಡೆಸಲಾಗುವ ಸಮಿತಿ ಸಭೆಗೆ ಮಾನ್ಯ ಶಾಸಕರನ್ನು ಆಹ್ವಾನಿಸಿ, ಅವರ ಅವಗಾಹನೆಗೆ ತರಲು ತೀರ್ಮಾನಿಸಲಾಯಿತು.**

6. ಸ್ವಚ್ಛ ಸರ್ವೇಕ್ಷಣ್‌ಗೆ ವೋಟ್ ಮಾಡಲು ಸಾರ್ವಜನಿಕರ ಫೀಡ್ ಬ್ಯಾಕ್ ಪಡೆಯಲು ಅಭಿಯಾನ ನಡೆಸಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಯಿತು.
   **ಕ್ರಮ: ವಾರ್ಡ್‌ನ ಕಿರಿಯ ಆರೋಗ್ಯ ಪರಿವೀಕ್ಷಕರು ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಫತ್ಯಾನಿರವರಿಗೆ ವರದಿ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ.**

7. ಇ-ಟಾಯ್ಲೆಟ್‌ಗಳನ್ನು ನಿರ್ಮಿಸಲು ಸ್ಥಳ ಪರಿಶೀಲನೆ ನಡೆಸುವುದಾಗಿ ಸಭೆಗೆ ತಿಳಿಸಲಾಯಿತು.
   **ಕ್ರಮ: ಸ್ಮಾರ್ಟ್ ಸಿಟಿ ಸಂಸ್ಥೆಯವರಿಂದ ರಸ್ತೆ ಕಾಮಗಾರಿ ನಡೆಯುತ್ತಿದ್ದು, ತದನಂತರ ಸ್ಥಳ ಪರಿಶೀಲನೆ ನಡೆಸುವುದಾಗಿ ತೀರ್ಮಾನಿಸಲಾಯಿತು.**

8. ಕನ್ನಡದಲ್ಲಿ ನಾಮಫಲಕಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಯಿತು.
   **ಕ್ರಮ: ಇಂಜಿನಿಯರಿಂಗ್ ವಿಭಾಗರವರಿಗೆ ಸೂಚಿಸಲಾಗಿದ್ದು, ವರದಿ ಸಲ್ಲಿಸಲು ಸೂಚಿಸಲಾಗಿದೆ.**

(ಮು.ತಿ.ನೋ)

9. ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿ ಟ್ರಾನ್ಸ್‌ಫೋರ್ಟ್ ಸ್ಟೇಷನ್ ಸೆಂಟರ್ ನಿರ್ಮಿಸಲು ಸೂಚಿಸಲಾಯಿತು.
**ಕ್ರಮ: ದಿನಾಂಕ: 19.02.2021 ರಂದು ಬೆಳಗ್ಗೆ 9.00 ಗಂಟೆಗೆ ಕನ್ನಿಂಗ್‌ಹ್ಯಾಮ್ ರಸ್ತೆಯ ಹಲಸೂರು ಕೆರೆಯ ಒಳಭಾಗದಲ್ಲಿ ಟ್ರಾನ್ಸ್‌ಫೋರ್ಟ್ ಸ್ಟೇಷನ್ ಸೆಂಟರ್ ನ ಗುದ್ದಲಿ ಪೂಜೆಯನ್ನು ನೆರವೇರಿಸಲಾಯಿತು.**

10. ಫುಟ್ ಪಾತ್‌ಗಳಲ್ಲಿನ ಅಂಗಡಿ ಮುಗ್ಗಟ್ಟುಗಳನ್ನು ತೆರವುಗೊಳಿಸಲು ಹಾಗೂ ಮಾಂಸದಂಗಡಿಗಳನ್ನು ಬೀದಿ ಬದಿಯಲ್ಲಿ ಮಾರಾಟ ಮಾಡದೇ ಸಾರ್ವಜನಿಕರ ಧಾರ್ಮಿಕ ಭಾವನೆಗಳಿಗೆ ದಕ್ಕೆಯಾಗದಂತೆ ಮಾರಾಟ ಮಾಡಲು ಸೂಚಿಸಲಾಯಿತು.
**ಕ್ರಮ: ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ದೂರವಾಣಿ ಮುಖಾಂತರ ತಿಳಿಸಿದ್ದು, ಮುಂದಿನ ಸಮಿತಿ ಸಭೆಯಲ್ಲಿ ವರದಿ ಸಲ್ಲಿಸುವುದಾಗಿ ತಿಳಿಸಿರುತ್ತಾರೆ.**

11. ಫುಟ್‌ಪಾತ್‌ಗಳಲ್ಲಿನ ಅಂಗಡಿಗಳನ್ನು ತೆರವುಗೊಳಿಸಲು ಪರಿಶೀಲನೆ ನಡೆಸುವುದಾಗಿ ಸಭೆಗೆ ತಿಳಿಸಲಾಯಿತು.
**ಕ್ರಮ: ಸ್ವಚ್ಛ ಸರ್ವೇಕ್ಷಣ್ ಹಾಗೂ ಪಾಲಿಕೆಯ ಇನ್ನಿತರೆ ಕೆಲಸಗಳಲ್ಲಿ ಭಾಗಿಯಾಗಬೇಕಾಗಿರುವುದರಿಂದ ಮುಂದಿನ ವಾರ ಪರಿಶೀಲನೆ ನಡೆಸಲು ತೀರ್ಮಾನಿಸಲಾಯಿತು.**

12. ಬೆಸ್ಕಾಂ, ಸ್ಮಾರ್ಟ್ ಸಿಟಿ ಹಾಗೂ ಅವಿಷ್ಕಾ ಅಕಾಡೆಮಿ ಮುಖ್ಯಸ್ಥರನ್ನು ಮುಂದಿನ ಸಭೆಗೆ ಆಹ್ವಾನಿಸಲು ಸೂಚಿಸಲಾಯಿತು.
**ಕ್ರಮ: ದೂರವಾಣಿ ಮುಖಾಂತರ ಆಹ್ವಾನಿಸಲಾಗಿದೆ.**

13. ಆರ್.ಕೆ. ಮಠ್ ರಸ್ತೆಯಲ್ಲಿರುವ ಫ್ಲಿಫ್ ಕಾರ್ಟ್ ಅಂಗಡಿಯವರಿಗೆ ನೋಟಿಸ್ ಜಾರಿಗೊಳಿಸಿ ಅಂಗಡಿಯನ್ನು ಮುಚ್ಚಲು ಸೂಚಿಸಲಾಯಿತು.
**ಕ್ರಮ: ರೆವಿನ್ಯೂ/ಹಿರಿಯ ಆರೋಗ್ಯ ಪರಿವೀಕ್ಷಕರು ಕ್ರಮ ಕೈಗೊಳ್ಳಲು ಸೂಚಿಸಿದ್ದು, ಮುಂದಿನ ಸಭೆಯಲ್ಲಿ ವರದಿ ಸಲ್ಲಿಸಲು ಸೂಚಿಸಲಾಗಿದೆ.**

14. ಹಿರಿಯ ನಾಗರೀಕರ ಕಲ್ಯಾಣಾಭಿವೃದ್ಧಿಗಾಗಿ ಕ್ರಮವಹಿಸಲು ಕೋರಲಾಯಿತು.
**ಕ್ರಮ: ಮುಂದಿನ ಬಾರಿ ನಡೆಸಲಾಗುವ ಸಮಿತಿ ಸಭೆಗೆ ಮಾನ್ಯ ಶಾಸಕರನ್ನು ಆಹ್ವಾನಿಸಿ, ಅವರ ಅವಗಾಹನೆಗೆ ತರಲು ತೀರ್ಮಾನಿಸಲಾಯಿತು.**

15. ದೋಬಿ ಗಾರ್ಡನ್ ನಲ್ಲಿ ಗಾಂಜಾ ಸೇವನೆ ಮಾಡುತ್ತಿರುವುದಾಗಿ ಸಭೆಯ ಗಮನಕ್ಕೆ ತರಲಾಯಿತು.
**ಕ್ರಮ: ಈ ಕುರಿತಂತೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ಹಾಜರಿದ್ದ ಶ್ರೀ. ರವಿಕುಮಾರ್, ಪೋಲೀಸ್ ಇಲಾಖೆರವರು ತಿಳಿಸಿದರು.**

ಅಂತಿಮವಾಗಿ ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಮುಂದಿನ ಸಭೆಯನ್ನು ವಾರ್ಡ್ ಕಛೇರಿಯಲ್ಲಿ ಆಯೋಜಿಸಲು ಕ್ರಮವಹಿಸುವಂತೆ ಹಾಗೂ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಕುರಿತು ಸೂಕ್ತ ಕ್ರಮಕ್ಕಾಗಿ ಅನುಪಾಲನಾ ವರದಿಯನ್ನು ಸಿದ್ಧಪಡಿಸಲು ಅಧಿಕಾರಿಗಳಿಗೆ ಸೂಚಿಸಿ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

**ಜಂಟಿ ಆಯುಕ್ತರು (ಪೂರ್ವ) ಮತ್ತು**
**ನೋಡಲ್ ಅಧಿಕಾರಿ, ವಾರ್ಡ್ ಸಂಖ್ಯೆ-90, ಹಲಸೂರು,**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**(ಪು.ತಿ.ನೋ)**

ರವರಿಗೆ,

1. ಮುಖ್ಯ ಅಭಿಯಂತರರು, ಫತ್ಯಾನಿ, ಪೂರ್ವವಲಯ
2. ಮುಖ್ಯ ಅಭಿಯಂತರರು, ಕೆರೆಗಳು, ಪೂರ್ವವಲಯ
3. ಅಧೀಕ್ಷಕ ಅಭಿಯಂತರರು, ಪೂರ್ವವಲಯ
4. ಮುಖ್ಯ ಆರೋಗ್ಯಾಧಿಕಾರಿಗಳು, ಶಿವಾಜಿನಗರ ವಿಭಾಗ
5. ಕಾರ್ಯಪಾಲಕ ಅಭಿಯಂತರರು, ಕಂದಾಯ ಇಲಾಖೆ, ಶಿವಾಜಿನಗರ ವಿಭಾಗ
6. ಕಂದಾಯ ಅಧಿಕಾರಿ (ಶಿವಾಜಿನಗರ)
7. ಅರಣ್ಯ ಅಧಿಕಾರಿ (ಪೂರ್ವ ವಲಯ)
8. ತೋಟಗಾರಿಕೆ ಅಧೀಕ್ಷಕರು (ಪೂರ್ವ)
9. ಆರೋಗ್ಯ ವೈದ್ಯಾಧಿಕಾರಿ (ಪೂರ್ವ)
10. ಉಪ ನಿರ್ದೇಶಕರು (ಪಶುಪಾಲನೆ)
11. ಸಹಾಯಕ ಕಂದಾಯ ಅಧಿಕಾರಿ (ಕಲ್ಯಾಣ-ಪೂರ್ವ)
12. ಆರಕ್ಷಕ ನಿರೀಕ್ಷಕರು (ಹಲಸೂರು-ಸಂಚಾರಿ) ವಿಭಾಗ
13. ಆರಕ್ಷಕ ನಿರೀಕ್ಷಕರು (ಹಲಸೂರು-ಕಾನೂನು ಮತ್ತು ಸುವ್ಯವಸ್ಥೆ) ವಿಭಾಗ
14. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯೂಎಸ್‌ಎಸ್‌ಬಿ)
15. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ
16. ಸಹಾಯಕ ಕಾರ್ಯಪಾಲಕ ಅಭಿಯಂತರರು, ಅರಣ್ಯ ಇಲಾಖೆ, ಹಲಸೂರು ವಿಭಾಗ
17. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಂದಾಯ ಇಲಾಖೆ, ಹಲಸೂರು ವಿಭಾಗ
18. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಮಳೆ ನೀರಿನ ಚರಂಡಿ)
19. ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ವಿದ್ಯುತ್-ಪೂರ್ವ)
20. ವಾರ್ಡ್ ಮಾರ್ಷಲ್ & ಸೂಪರ್‌ವೈಸರ್
21. ಸಹಾಯಕ ಕಾರ್ಯಪಾಲಕ ಅಭಿಯಂತರರು, ಫತ್ಯಾನಿ
22. ಸಹಾಯಕ ಕಾರ್ಯಪಾಲಕ ಅಭಿಯಂತರರು, ಇಂಜಿನಿಯರ್ ವಿಭಾಗ, ಶಿವಾಜಿನಗರ ವಿಭಾಗ
23. ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ-90
24. ಕಿರಿಯ ಆರೋಗ್ಯ ಪರಿವೀಕ್ಷಕರು, ಫತ್ಯಾನಿ
25. ಗುತ್ತಿಗೆದಾರರು, ಫತ್ಯಾನಿ ವಿಭಾಗ
26. ರೆಸಿಡೆನ್ಸ್ ವೆಲ್ಫೇರ್ ಅಸೋಸಿಯೇಷನ್, ಹಲಸೂರು
27. ಪ್ರಧಾನ ಗ್ಯಾಂಗ್ ಮೆನ್
28. ಲಿಂಕ್ ವರ್ಕರ್ಸ್
29. ಸಂಬಂಧಪಟ್ಟ ಎಲ್ಲಾ ಇಲಾಖಾ ಅಧಿಕಾರಿ/ನೌಕರರುಗಳ ಗಮನಕ್ಕೆ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

**ಪ್ರತಿಯನ್ನು:**

1. ಮಾನ್ಯ ಆಡಳಿತಾಧಿಕಾರಿಗಳು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ವಿಶೇಷ ಆಯುಕ್ತರು/ಸಹಾಯಕ ಆಯುಕ್ತರು, ಆಡಳಿತರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಜಂಟಿ ಆಯುಕ್ತರು, ಪೂರ್ವ ವಲಯರವರಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಉಪ ಆಯುಕ್ತರು, ಪೂರ್ವ ವಲಯರವರಿಗೆ ಮಾಹಿತಿಗಾಗಿ ಕಳುಹಿಸಿದೆ.
6. ಸಂಬಂಧಪಟ್ಟವರಿಗೆ/ಕಛೇರಿ ಪ್ರತಿ